# ನಿಮ್ಮೊಡನೆ

## ಸರ್ಕಾರದ ಹೊಣೆ

ಕನ್ನಡದ ಬಗೆಗಿನ ಆತಂಕಗಳು ದಿನೇ ದಿನೇ ಹೆಚ್ಚುತ್ತಿವೆ. ಈ ವಿಚಾರದಲ್ಲಿ ತುರ್ತಾಗಿ ಏನು ಆಗಬೇಕಿದೆಯೋ ಅದು ಆಗುತ್ತಿಲ್ಲ. ಆಡಳಿತದಲ್ಲಿ ಕನ್ನಡ ಬಳಕೆಯನ್ನು ವಿಸ್ತರಿಸುವ ವಿಷಯದಲ್ಲಿ ಅಡ್ಡಿ– ಆತಂಕಗಳು ಇದ್ದೇ ಇವೆ. ಆಡಳಿತದಲ್ಲಿ ಕನ್ನಡ ಬಳಕೆ ಹೆಚ್ಚಿಸುವ ಪ್ರಯತ್ನಗಳಿಗೆ ವಿಧಾನಸೌಧದಲ್ಲಿ ಕುಳಿತಿರುವ ಹಿರಿಯ ಅಧಿಕಾರಿಗಳೇ ತೊಡರುಗಾಲಾಗಿ ಪರಿಣಮಿಸಿದ್ದಾರೆ. ಆಡಳಿತದ ಮುಖ್ಯ ಕೇಂದ್ರವಾದ ವಿಧಾನಸೌಧ, ಬ್ರಿಟಿಷ್ ವಸಾಹತುಶಾಹಿ ಗುಂಗಿನಿಂದ ಇನ್ನೂ ಹೊರಬರದಿರುವುದೇ ಇದಕ್ಕೆ ಕಾರಣ. ನಮ್ಮ ಭಾಷಾ ನೀತಿಯಲ್ಲಿ ಕನ್ನಡ ಬಳಕೆಯನ್ನು ನಿರಾಕರಿಸುವ ಧೋರಣೆ ಎಲ್ಲೂ ಕಾಣಿಸುವುದಿಲ್ಲ. ಕನ್ನಡವನ್ನು ಬಳಸಬಾರದು ಎಂದು ಹೇಳುವುದಿಲ್ಲವಾದರೂ ಸದ್ದಿಲ್ಲದೆ ಇಂಗ್ಲಿಷ್ ಬಳಕೆಯನ್ನು ಮುಂದುವರಿಸಲು ಅನುವಾಗಿಸುತ್ತೇವೆ. ಆ ಮೂಲಕ ಕನ್ನಡ ಬಳಕೆಗೆ ಇರುವ ಅವಕಾಶವನ್ನು ಪರೋಕ್ಷವಾಗಿ ಮೊಟಕುಗೊಳಿಸುತ್ತೇವೆ.

ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯಾಗಿ ಜಾರಿಗೆ ತರಬೇಕಾದುದು ಸರ್ಕಾರದ ಜವಾಬ್ದಾರಿ. ಆದರೆ ಪೂರ್ಣ ಪ್ರಮಾಣದಲ್ಲಿ ಅದು ಸಾಧ್ಯವಾಗಿಲ್ಲ. ಈ ಉದ್ದೇಶಕ್ಕಾಗಿ ಸರ್ಕಾರ ನೂರಾರು ಆದೇಶಗಳನ್ನು ಹೊರಡಿಸಿದೆಯಾದರೂ ಅದರ ಪರಿಣಾಮ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ಆಡಳಿತದಲ್ಲಿ ಕನ್ನಡದ ಬಳಕೆ ಹೆಚ್ಚಾಗುತ್ತಿದೆ ಎಂದು ಸರ್ಕಾರ ಹೇಳುತ್ತದೆ. ಅದನ್ನು ಸಮರ್ಥಿಸಲು ಅಂಕಿ ಅಂಶಗಳನ್ನೂ ಒದಗಿಸುತ್ತದೆ. ಆದರೆ ಅದು ಅರ್ಧಸತ್ಯ. ಕೆಳ ಹಂತದಲ್ಲಿ ಕನ್ನಡದ ಬಳಕೆ ಹೆಚ್ಚಾಗಿರುವುದು ನಿಜವಾದರೂ ಇದೇ ಮಾತನ್ನು ಮೇಲಿನ ಹಂತಕ್ಕೆ ಅನ್ವಯಿಸಲು ಆಗುವುದಿಲ್ಲ. ಉನ್ನತ ಹಂತಕ್ಕೆ ಹೋದಂತೆಲ್ಲ ಕನ್ನಡ ಬಳಕೆಯ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಆಡಳಿತವನ್ನು ನಿಜ ಅರ್ಥದಲ್ಲಿ ನಿಯಂತ್ರಿಸುವ ಐ.ಎ.ಎಸ್. ಅಧಿಕಾರಿಗಳ ಮನೋಧರ್ಮ ಹಾಗೂ ಇಂಗ್ಲಿಷ್ ಬಗೆಗಿನ ಅವರ ಮೋಹವೇ ಇದಕ್ಕೆ ಮುಖ್ಯ ಕಾರಣ. ಕನ್ನಡ ಬಳಕೆಗೆ ಕಂಟಕವಾಗಿ ಪರಿಣಮಿಸಿರುವ ಇಂತಹ ಮನೋಧರ್ಮಕ್ಕೆ ವ್ಯಕ್ತಿ ನೆಲೆಯಲ್ಲಿ ಕೆಲವು ಅಧಿಕಾರಿಗಳು ಅಪವಾದವೆನಿಸಿದರೂ ಒಟ್ಟಾರೆ ಪರಿಣಾಮದ ದೃಷ್ಟಿಯಿಂದ ಹೇಳುವುದಾದರೆ ಆಯಕಟ್ಟಿನ ಜಾಗಗಳಲ್ಲಿ ಕುಳಿತಿರುವ ಹಿರಿಯ ಅಧಿಕಾರಿಗಳ ನಿಲುವು ಕನ್ನಡದ ಪರವಾಗಿಲ್ಲ ಎಂಬುದು ಸ್ಪಟಿಕಸ್ಪಷ್ಟ.

ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಕೌಶಿಕ್ ಮುಖರ್ಜಿ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ಎಲ್.ಹನುಮಂತಯ್ಯ ಅವರ ನಡುವೆ ನಡೆದಿದೆ ಎನ್ನಲಾದ ಮುಸುಕಿನ ಗುದ್ದಾಟಕ್ಕೂ ಅಧಿಕಾರಿಗಳಲ್ಲಿನ ಕನ್ನಡ ಪರವಾದ ಬದ್ಧತೆಯ ಕೊರತೆಯೇ ಕಾರಣ ಎನ್ನಬಹುದು. ಆಡಳಿತದ ವಿವಿಧ ವಲಯಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದ ಪ್ರಗತಿ ಪರಿಶೀಲನೆ ಅಭಿಯಾನವನ್ನು ಮುಖ್ಯ ಕಾರ್ಯದರ್ಶಿ ಕಚೇರಿಯಿಂದ ಆರಂಭಿಸಬಯಸಿರುವ ಪ್ರಾಧಿಕಾರದ ಉದ್ದೇಶದಲ್ಲಿ ತಪ್ಪೇನೂ ಇಲ್ಲ. ಸಭೆ ನಡೆಸುವ ಬಗ್ಗೆ ಮೊದಲೇ ವಿನಂತಿ ಪತ್ರವನ್ನೂ ಕಳುಹಿಸಲಾಗಿದೆ. ಅದಕ್ಕೆ, 'ನೀವು ನನ್ನ ಕಚೇರಿಗೆ ಬಂದು ಪರಿಶೀಲಿಸಬಹುದು. ಆದರೆ ಇಲ್ಲಿ ಸಭೆ ನಡೆಸುವುದು ಸರಿಯಲ್ಲ' ಎಂದು ಉತ್ತರಿಸಿರುವುದು ಒಪ್ಪತಕ್ಕ ಮಾತಲ್ಲ. ಕನ್ನಡ ಅನುಷ್ಠಾನದ ಪರಿಶೀಲನೆಗೆ ಯಾವುದೇ ಕಚೇರಿಗೆ ದಿಢೀರ್ ಭೇಟಿ ನೀಡುವ ಅಧಿಕಾರ ಪ್ರಾಧಿಕಾರದ ಅಧ್ಯಕ್ಷರಿಗಿದೆ. ಮುಖ್ಯ ಕಾರ್ಯದರ್ಶಿಗೆ ಇದು ಗೊತ್ತಿಲ್ಲದ ವಿಚಾರವೂ ಅಲ್ಲ. ಆದರೂ 'ನನ್ನ ಕಚೇರಿಯಲ್ಲಿ ಸಭೆ ನಡೆಸುವುದು ಬೇಡ. ಬೇರೆ ಕಡೆ ಸಭೆ ನಡೆಸಿದರೆ ಹಾಜರಾಗುತ್ತೇನೆ' ಎಂದಿರುವುದು ನೌಕರ ವರ್ಗಕ್ಕೆ ತಪ್ಪು ಸಂದೇಶ ರವಾನಿಸುವಂಥ ನಡೆ. ಆಡಳಿತ ಯಂತ್ರದ ಕೀಲಿಕೈ ಎನಿಸಿಕೊಂಡವರಿಂದಲೇ ಇಂತಹ ನಿರುತ್ಸಾಹದ ಸ್ಪಂದನ ಎದುರಾದರೆ, ಆಡಳಿತದಲ್ಲಿ ಕನ್ನಡವನ್ನು ನೆಲೆಗೊಳಿಸುವ ಪ್ರಯತ್ನಗಳಿಗೆ ಮತ್ತಷ್ಟು ಹಿನ್ನಡೆ ಆಗುವುದಿಲ್ಲವೆ? 'ಐ.ಟಿ., ಬಿ.ಟಿ. ಕಂಪೆನಿಗಳಲ್ಲಿ ಕನ್ನಡ ಅನುಷ್ಠಾನ, ಕನ್ನಡಿಗರಿಗೆ ಉದ್ಯೋಗ ನೀಡುವ ಕುರಿತು ಒತ್ತಡ ಹೇರಿದರೆ ಆ ಕಂಪೆನಿಗಳು ತಮ್ಮ ಕಾರ್ಯಕ್ಷೇತ್ರವನ್ನು ಬೇರೆ ರಾಜ್ಯಗಳಿಗೆ ಸ್ಥಳಾಂತರಿಸುವ ಅಪಾಯ ಇದೆ. ಹೀಗಾಗಿ ಅವರನ್ನು ಈ ಪರಿಧಿಯಿಂದ ಹೊರಗಿಡಿ' ಎಂದು ಐ.ಟಿ., ಬಿ.ಟಿ. ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರಂತೆ. ಆ ಕಂಪೆನಿಗಳು ನಿಯಮಗಳಿಗೆ ಅತೀತವೆ? ಈ ಬಗೆಯ ಒತ್ತಡ ತಂತ್ರಗಳಿಗೆ ಮಣಿಯಬಾರದು. ಆಡಳಿತದಲ್ಲಿ ಕನ್ನಡ ಅನುಷ್ಠಾನಕ್ಕೆ ಪ್ರಾಯೋಗಿಕ ತೊಂದರೆಗಳಿದ್ದರೆ ಅವುಗಳನ್ನು ನಿವಾರಿಸಬೇಕು. ಕನ್ನಡ ಬಳಕೆಯ ಸಾಧ್ಯತೆಗಳನ್ನು ಹಿಗ್ಗಿಸಬೇಕು. ಈ ವಿಚಾರದಲ್ಲಿ ಮುಲಾಜಿಗೆ ಒಳಗಾಗದೆ ಸರ್ಕಾರ ಕಟಿಬದ್ಧವಾಗಿ ನಡೆದುಕೊಳ್ಳಬೇಕು.

■ ಎನ್.ಉದಯಕುಮಾರ್

ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯಾಗಿ ಜಾರಿಗೆ ತರಬೇಕಾದುದು ಸರ್ಕಾರದ ಜವಾಬ್ದಾರಿ. ಆದರೆ ಪೂರ್ಣ ಪ್ರಮಾಣದಲ್ಲಿ ಅದು ಸಾಧ್ಯವಾಗಿಲ್ಲ. ಈ ಉದ್ದೇಶಕ್ಕಾಗಿ ಸರ್ಕಾರ ನೂರಾರು ಆದೇಶಗಳನ್ನು ಹೊರಡಿಸಿದೆಯಾದರೂ ಅದರ ಪರಿಣಾಮ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ.

